ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಮಿತಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ        ದಿನಾಂಕ : DATE : 13/12/19

# ದೇವದಾಸಿ ಪದ್ಧತಿ ಇನ್ನೂ ಜೀವಂತ!

ದಿನಾಂಕ 13/12/19

## ವಿಜಯಪುರದ ಕಾಖಂಡಕಿಯಲ್ಲಿ ಬೆಳಕಿಗೆ | ಮುತ್ತು ಕಟ್ಟಿಸಿಕೊಂಡಿದ್ದ ಬಾಲಕಿ ರಕ್ಷಣೆ

■ ಶಶಿಕಾಂತ ಮೆಂಡೆಗಾರ, ವಿಜಯಪುರ

ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸರ್ಕಾರ ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡು ಅರಿವು ಮೂಡಿಸುತ್ತಿದ್ದರೂ ಬಬಲೇಶ್ವರ ತಾಲೂಕು ಕಾಖಂಡಕಿ ಗ್ರಾಮದಲ್ಲಿ ಬಾಲಕಿಯೊಬ್ಬಳಿಗೆ ಮುತ್ತುಕಟ್ಟಿದ್ದ ಅಮಾನವೀಯ ಪ್ರಕರಣ ಬೆಳಕಿಗೆ ಬಂದಿದೆ. ಅನಿಷ್ಟ ಪದ್ಧತಿಯನ್ನು ತೊಲಗಿಸಲು ಬದುಕು ಸವೆಸಿ, ದೇವತೆಯ ಸ್ಥಾನಕ್ಕೇರಿದ್ದ ದೇವದಾಸಿ ಕೆಂಚಮ್ಮನವರ ಊರಲ್ಲೇ ಮತ್ತೆ ಈ ಪದ್ಧತಿ ಬೆಳಕಿಗೆ ಬಂದಿರುವುದು ವಿಪರ್ಯಾಸ.

**ಮುತ್ತು ಕಟ್ಟಿದ ಕತೆ:** ಕಾಖಂಡಕಿಯ ಕುಟುಂಬವೊಂದರ ಬಾಲಕಿ ಚಿಕ್ಕವಳಿದ್ದಾಗ ಪದೇಪದೆ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಳಂತೆ. ಅಲ್ಲದೆ ಕೆಟ್ಟ ಕನಸು ಬೀಳುತ್ತಿತ್ತಂತೆ. ಹೀಗಾಗಿ ಈಕೆಗೆ ತಾಯಿ ಯಲ್ಲಮ್ಮ ದೇವಿಯ ಕಾಟವಿದೆ. ಮುತ್ತು ಕಟ್ಟಿದರೆ ಸರಿಯಾಗುತ್ತದೆ ಎಂದು ಕುಟುಂಬದವರೆಲ್ಲ ಸೇರಿ ಮುತ್ತು ಕಟ್ಟಿಸಿದ್ದಾರೆ. ಇದೀಗ ಆಕೆ ಹರೆಯಕ್ಕೆ ಬಂದಿದ್ದು, ತಾಯಿ ಯಲ್ಲಮ್ಮದೇವಿ ಹೆಸರಿನಲ್ಲಿ ಆಕೆಯನ್ನು ಯಾರಿಗಾದರೂ ಒಪ್ಪಿಸಬೇಕು ಎಂದು ತಯಾರಿ ನಡೆಸಲಾಗಿತ್ತು. ಮುತ್ತು ಕಟ್ಟಿದ ಬಾಲಕಿಯನ್ನು ಕಾನೂನುಬಾಹಿರವಾಗಿ ಬೇರೊಬ್ಬರ ಜತೆ ಸೇರಿಸುವ ತಯಾರಿ ನಡೆಸಲಾಗಿದೆ ಎಂಬ ಮಾಹಿತಿ ತಿಳಿಯುತ್ತಲೇ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಿರ್ಮಲಾ ಸುರಪುರ ಹಾಗೂ ತಂಡ ಬಾಲಕಿಯನ್ನು ರಕ್ಷಣೆ ಮಾಡಿ ತಂದು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಿದ್ದಾರೆ.

ಆಕೆಯೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಬಾಲಕಿಯ ನರಕಯಾತನೆ ಬೆಳಕಿಗೆ ಬಂದಿದೆ. ಚಿಕ್ಕವರಿದ್ದಾಗಲೇ ಈಕೆ ತಂದೆ-ತಾಯಿ ತೀರಿಹೋಗಿದ್ದು, ಬಡತನದಿಂದಾಗಿ 5ನೇ ತರಗತಿಗೆ ಶಾಲೆ ಬಿಡಿಸಿದ್ದಾರೆ. ಬಳಿಕ ಮನೆಯಲ್ಲಿ ಅಜ್ಜಿಯೊಬ್ಬರಿದ್ದು ಅವರೇ ನನಗೆ ಮುತ್ತು ಕಟ್ಟಿಸಿದ್ದಾರೆ ಎಂದು ಬಾಲಕಿ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರ ಮುಂದೆ ತನ್ನ ನೋವು ತೋಡಿಕೊಂಡಿದ್ದಾಳೆ.

ಸಾಂದರ್ಭಿಕ ಚಿತ್ರ



ದೇವದಾಸಿಯಾಗುವವರಿಗೆ ಕಟ್ಟಲಾಗುವ ಮುತ್ತು.

ಕಾಖಂಡಕಿ, ಜೈನಾಪುರ, ಮಮದಾಪುರ ಸೇರಿ ಸುತ್ತಲಿನ ಈ ಭಾಗದಲ್ಲಿ ಇನ್ನೂ ಅದೆಷ್ಟೋ ಮುಗ್ಧ ಬಾಲಕಿಯರು ಮನೆಯಲ್ಲಿನ ಹಿರಿಯರ ಮೂಢನಂಬಿಕೆಯಲ್ಲಿ ಮುತ್ತು ಕಟ್ಟಿಸಿಕೊಂಡು ನರಳುತ್ತಿದ್ದು, ಅಂತಹವರನ್ನು ಹುಡುಕಿ ಜಾಗೃತಿ ಮೂಡಿಸಿ, ರಕ್ಷಣೆ ಮಾಡಬೇಕಿದೆ.

| ಯಲ್ಲಪ್ಪ ಇರಕಲ್ಲ
ಮಕ್ಕಳ ಕಲ್ಯಾಣ ಸಮಿತಿ ಸದಸ್ಯ

ಬಾಲಕಿಗೆ ಚಿಕ್ಕವಳಿದ್ದಾಗಲೇ ಮುತ್ತು ಕಟ್ಟಿಸಲಾಗಿತ್ತು. ಈಗ ಆಕೆಯನ್ನು ಯಲ್ಲಮ್ಮ ದೇವಿ ಹೆಸರಲ್ಲಿ ದೇವದಾಸಿ ಮಾಡಿ ಬೇರೊಬ್ಬರಿಗೆ ಬಿಡಲು ತಯಾರಿ ನಡೆಸಿದ್ದ ಮಾಹಿತಿ ಹಿನ್ನೆಲೆ ಮಕ್ಕಳ ರಕ್ಷಣಾಧಿಕಾರಿಗಳು ರಕ್ಷಿಸಿದ್ದಾರೆ.

| ಶ್ರೀಧರ ಕುಲಕರ್ಣಿ
ಅಧ್ಯಕ್ಷ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ